**ಸ್...** ಸ್... ಗುಶ್... ಅಂತಾ ಮನೆಯ ಹೊರಗಿನ ತೊಟ್ಟಿಯಲ್ಲಿನ ನಲ್ಲಿ, ಒಳ್ಳೇ ಹಾವಿನ ಹಾಗೆ ಬುಸುಗುಡುವ ಶಬ್ದ ಮಾಡುತ್ತಿದ್ದಂತೆ, 'ಅಮ್ಮಾ, ನೀರು ಬಂತು' ಅಂತಾ ಕೂಗುತ್ತಾ, ಅಮ್ಮನಿಗೆ ಬ್ರೇಕಿಂಗ್ ನ್ಯೂಸ್ ಕೊಡಲು ಒಳಗೆ ಓಡುತ್ತಿದ್ದೆವು. ವಿಷಯ ಕೇಳುತ್ತಿದ್ದ ಹಾಗೆ ಅಮ್ಮನ ಮುಖ ಖುಷಿಯಿಂದ ನೂರು ವೋಲ್ಟ್ ಬಲ್ಬಿನ ಹಾಗೆ ಝಗಮಗ ಹೊಳೆಯುತ್ತಾ, ಅದೆಂತಹ ದೊಡ್ಡ ಘನಂದಾರಿ ಕೆಲಸ ಮಾಡುತ್ತಿದ್ದರೂ ಸಹ ಅದನ್ನು ಇದ್ದಲ್ಲಿಯೇ ಕೈಬಿಟ್ಟು ಹೊರಗೆ ಧಾವಿಸುತ್ತಿದ್ದಳು. ಮೊದಲು ನೀರು ಮುಖ್ಯ, ಅದೊಂದಿದ್ದರೆ ಬೇರೆ ಕೆಲಸವೆಲ್ಲ ಸರಾಗ, ಒಂದು ಹೊತ್ತು ಊಟ ಇಲ್ಲದಿದ್ದರೂ ಇರಬಹುದು, ನೀರು ಇರದಿದ್ದರೆ ಸಾಧ್ಯವಿಲ್ಲ, ಎನ್ನುವ ಧ್ಯೇಯವಾಕ್ಯವನ್ನು ಪ್ರತಿಸಲ ನೀರು ಬಿಟ್ಟಾಗಲೂ ತಪ್ಪದೆ ಹೇಳುತ್ತಾ, ನೂರಾ ಮೂವತ್ತು ಕೆಜಿ ತೂಕದ ತನ್ನ ಭಾರವನ್ನೂ ಸಹ ಲೆಕ್ಕಿಸದೆ, ಉಶ್... ಉಶ್... ಅಂತಾ ತೇಕುತ್ತಲೇ ಹೊರಬರುತ್ತಿದ್ದಳು. ತೊಟ್ಟಿಯ ಮೇಲಿನ ಕಟ್ಟೆಯ ಮೇಲೆ, ದಸರಾದಲ್ಲಿ ದುರ್ಗದ ದೇವಿಯರು ಪಟ್ಟಕ್ಕೆ ಕುಳಿತಂತೆ, ಪಟ್ಟಾಗಿ ಕುಳಿತುಕೊಂಡು, ನೀರು ಬರುವ ಸಡಗರವನ್ನು ಕಣ್ತುಂಬಿಕೊಳ್ಳಲು ಕಾಯುತ್ತಾ, ಒಬ್ಬೊಬ್ಬರಿಗೆ ಒಂದೊಂದು ಕೆಲಸವನ್ನು ಹಚ್ಚಿಬಿಡುತ್ತಿದ್ದಳು. ನೀರು ತುಂಬುವ ಹಬ್ಬ ಯುಗಾದಿ, ದೀಪಾವಳಿಯಲ್ಲಿ ಮಾತ್ರವಲ್ಲ, ಚಿತ್ರದುರ್ಗದಂತಹ ಬಯಲುಸೀಮೆಯ ಜನರಿಗೆ ನೀರು ಬಂದ ದಿನವೇ ಹಬ್ಬ ಬಿಡಿ.

ಅಮ್ಮ ಹೊರಗೆ ಕುಳಿತು ಬಾಯಿ ಮಾಡುತ್ತಿದ್ದಂತೆ, ಸುತ್ತಮುತ್ತ ಮನೆಯವರಿಗೆ ನೀರು ಬಂದಿರಬಹುದು ಎನ್ನುವ ಅನುಮಾನ ಬಂದು ತಮ್ಮ ತಮ್ಮ ಮನೆಯ ತೊಟ್ಟಿಯಲ್ಲಿ ಹಣಕಿ ಹಾಕುತ್ತಿದ್ದರು. ದಾರಿಯಲ್ಲಿ ನೀರು ಬಿಡುವ ಹನುಮಂತಣ್ಣ ಸೈಕಲ್ಲಿನಲ್ಲಿ, ಹಿಂದಿನ ಕ್ಯಾರಿಯರ್‌ನಲ್ಲಿ ದೊಡ್ಡ ಸ್ಪ್ಯಾನರ್ ಸಿಗಿಸಿಕೊಂಡು, ಒಳ್ಳೇ ಕುದುರೆ ಸಾರೋಟಿನಲ್ಲಿ ಕುಳಿತ ಪೋಸು ಕೊಡುತ್ತಾ ಹೋಗುವಾಗ, ಎಲ್ಲ ಮನೆಯವರೂ

